# ಭಾವೋನ್ಮಾದ



❁ ಭಗವಂತನಲ್ಲಿ ಅನುರಾಗ ಉಂಟಾದರೆ ಸಾಮಾನ್ಯ ಘಟನೆಯಿಂದಲೇ ಭಕ್ತಿ ಉದ್ದೀಪನೆಯಾಗಿಬಿಡುತ್ತದೆ. ಆಗ ಒಂದು ಸಲ ರಾಮನಾಮ ಜಪಿಸಿದರೆ ಅದಕ್ಕೆ ಒಂದು ಕೋಟಿ ಸಂಧ್ಯಾವಂದನೆಗಳ ಫಲ ದೊರೆತುಬಿಡುತ್ತದೆ. ಮೇಘವನ್ನು ನೋಡಿದೊಡನೆಯೆ ನವಿಲಿಗೆ ರಾಗದ ಉದ್ದೀಪನೆಯಾಗಿಬಿಡುತ್ತದೆ. ಆನಂದದಿಂದ ಪುಕ್ಕವನ್ನು ಕೆದರಿ ನಲಿಯುತ್ತದೆ. ಶ್ರೀಮತಿ (ರಾಧೆ)ಗೂ ಹಾಗೇ ಆಗುತ್ತಿತ್ತು. ಮೇಘವನ್ನು ನೋಡಿದೊಡನೆಯೆ ಆಕೆಗೆ ಕೃಷ್ಣನ ನೆನಪು ಬಂದುಬಿಡುತ್ತಿತ್ತು.

❁ ಚೈತನ್ಯದೇವ ಒಮ್ಮೆ ಒಂದು ಹಳ್ಳಿಯ ಹತ್ತಿರ ಹೋಗುತ್ತಿದ್ದ. ಆ ಹಳ್ಳಿಯ ಮಣ್ಣಿನಿಂದ ಮೃದಂಗ ತಯಾರಾಗುತ್ತದೆ ಎಂಬುದಾಗಿ ಯಾರೋ ಆತನಿಗೆ ಹೇಳಿದರು. ಒಡನೆಯೆ ಭಾವೋನ್ಮತ್ತನಾಗಿಬಿಟ್ಟ — ಏಕೆಂದರೆ ಹರಿನಾಮ ಸಂಕೀರ್ತನೆಯ ಸಮಯದಲ್ಲಿ ಮೃದಂಗವನ್ನು ಬಾಜಿಸುತ್ತಾರೆ.

❁ ಯಾರಿಗೆ ಭಗವದ್ಭಾವನೆಯ ಉದ್ದೀಪನೆಯಾಗುತ್ತದೆ? ವಿಷಯಾತ್ಮಿಕ ಬುದ್ಧಿಯನ್ನು ತ್ಯಜಿಸಿರತಕ್ಕವರಿಗೆ. ಯಾರ ವಿಷಯ ರಸ ಬತ್ತಿಹೋಗಿರುವುದೊ ಅವರಿಗೆ ಒಂದು ಸ್ವಲ್ಪದರಿಂದಲೆ ಭಗವದ್ಭಾವನೆಯ ಉದ್ದೀಪನೆಯಾಗಿಬಿಡುತ್ತದೆ. ಬೆಂಕಿಕಡ್ಡಿ ಒದ್ದೆಯಾಗಿದ್ದರೆ ಒಂದು ಸಾವಿರ ಸಲ ಗೀಚಿದರೂ ಅದು ಹತ್ತದು. ಆದರೆ ಒಣಗಿದರೆ ಒಂದು ಸ್ವಲ್ಪ ಗೀಚಿದರೇ ಸಾಕು 'ಧಗ್' ಎಂದು ಹತ್ತಿಕೊಂಡು ಬಿಡುತ್ತದೆ.

❁ ಯಾರು ಭಗವಚ್ಚಿಂತನೆ ಮಾಡುತ್ತಾರೊ, ಯಾರು ವಿಷಯಗಳಲ್ಲಿ ಆಸಕ್ತಿ — ಕಾಮಕಾಂಚನದಲ್ಲಿ ಆಸಕ್ತಿ ತೊಲಗಿ ಹೋಗಲು ಹಗಲೂ ಇರುಳೂ ಭಗವಂತನ ಪ್ರಾರ್ಥನೆ ಮಾಡುತ್ತಾರೊ, ಯಾರಿಗೆ ವಿಷಯ ರಸ ಕಹಿಯಾಗಿ ತೋರುವುದೊ, ಯಾರಿಗೆ ಹರಿಪಾದಪದ್ಮಸುಧೆ ಹೊರತು ಬೇರೆ ಏನೂ ರುಚಿಸದೊ ಅಂಥವರ ಸ್ವಭಾವ ಹಂಸಪಕ್ಷಿಯ ಹಾಗೆ ಆಗಿಬಿಟ್ಟಿರುತ್ತದೆ. ಹಂಸದ ಎದುರು ನೀರು ಬೆರೆಸಿದ ಹಾಲನ್ನು ಇಡಿ. ಅದು ನೀರನ್ನು ಬಿಟ್ಟು ಹಾಲನ್ನು ಕುಡಿದುಬಿಡುತ್ತದೆ. ಅದರ ನಡೆಯನ್ನು ನೀನು ನೋಡಿಲ್ಲವೇನು? ಅದು ನೇರವಾಗಿ ಮುಂದುಮುಂದಕ್ಕೆ ಮುಂಬರಿದುಬಿಡುತ್ತದೆ. ಶುದ್ಧ ಭಕ್ತರ ನಡೆಯೂ ಕೇವಲ ಭಗವಂತನ ಕಡೆಗೆಯೇ. ಅವರಿಗೆ ಬೇರೆ ಏನೂ ಬೇಕಾಗಿಲ್ಲ; ಅವರಿಗೆ ಬೇರೆ ಯಾವುದೂ ರುಚಿಸದು.

❁ ಅರುಣೋದಯವಾದರೆ ಪೂರ್ವ ಹೊಂಬಣ್ಣವಾಗುತ್ತದೆ. ಆಗ ಗೊತ್ತಾಗುತ್ತದೆ, ಸೂರ್ಯೋದಯಕ್ಕೆ ಇನ್ನು ಹೆಚ್ಚು ಹೊತ್ತು ಇಲ್ಲ. ಅದೇ ರೀತಿ ಯಾರಲ್ಲಿಯೇ ಆಗಲಿ ಭಗವಂತನಿಗಾಗಿ ಅತ್ಯಂತ ಅಗಾಧವಾದ ವ್ಯಾಕುಲತೆ ಉಂಟಾಗಿರುವುದು ಕಂಡುಬಂದರೆ, ಆಗ ಚೆನ್ನಾಗಿ ಗೊತ್ತಾಗುತ್ತದೆ ಆ ವ್ಯಕ್ತಿ ಸಾಕ್ಷಾತ್ಕಾರಕ್ಕಾಗಿ ಇನ್ನು ಹೆಚ್ಚು ಕಾಲ ಕಾದಿರಬೇಕಾಗಿಲ್ಲ ಅಂತ.

❁ ಕೆಲಕೆಲವರಿಗೆ, ಮುಳುಗಲು ಇಚ್ಛೆ ಇಲ್ಲ. ಅವರು ಹೇಳುತ್ತಾರೆ: 'ಭಗವಂತ, ಭಗವಂತ ಅಂತ ತಲೆ ಚಚ್ಚಿಕೊಂಡು ಕೊನೆಗೆ ಹುಚ್ಚರಾಗಿ ಬಿಡೋಣವೇನು?' ಯಾರು ಭಗವಂತನ ಪ್ರೇಮದಿಂದ ಮತ್ತರಾಗಿದ್ದಾರೊ ಅವರ ಸಂಬಂಧವಾಗಿ ಅವರು 'ಇವರಿಗೆ ತಲೆ ಕೆಟ್ಟುಹೋಗಿದೆ' ಅಂತ ಹೇಳುತ್ತಾರೆ. ಆದರೆ ಈ ಜನರಿಗೆ ಗೊತ್ತಾಗದು; ಸಚ್ಚಿದಾನಂದ ಅಮೃತಸಾಗರ ಎಂಬುದು... ಸಚ್ಚಿದಾನಂದ ಪಾನಕ ಅಂಥದೇನಲ್ಲ , ಅದು ಅಮೃತದ ಪಾನಕ. ಅದರಲ್ಲಿ ಮುಳುಗಿದರೆ ಮನುಷ್ಯ ಸಾಯುವುದಿಲ್ಲ , ಅಮರನಾಗಿಬಿಡುತ್ತಾನೆ.

❁ ನಿಜವಾಗಿ ಭಗವಂತನ ದರ್ಶನ ಆಗಿದೆಯೊ ಇಲ್ಲವೊ ಎಂಬುದನ್ನು ಅರಿಯಲು ಕೆಲವು ಲಕ್ಷಣಗಳಿವೆ. ಅವುಗಳಲ್ಲಿ ಒಂದು ಆನಂದ; ಸಂಕೋಚವಿರದು. ಆತನನ್ನು ಸಮುದ್ರಕ್ಕೆ ಹೋಲಿಸಬಹುದು; ಮೇಲೆ ಅಲ್ಲೋಲಕಲ್ಲೋಲ. ಅಂತರ್ಯದಲ್ಲಿ ಗಂಭೀರ ಜಲ. ಯಾರಿಗೆ ಭಗವಂತನ ದರ್ಶನ ದೊರೆತಿದೆಯೊ ಆತ ಕೆಲವು ವೇಳೆ ಹುಚ್ಚನ ಹಾಗೆ; ಕೆಲವು ವೇಳೆ ಪಿಶಾಚಿಯ ಹಾಗೆ — ಶುಚಿ ಅಶುಚಿ ಎಂಬ ಭೇದಜ್ಞಾನವಿಲ್ಲದೆ; ಕೆಲವು ವೇಳೆ ಜಡನ ಹಾಗೆ — ಒಳಗೆ ಹೊರಗೆ ಎಲ್ಲೆಲ್ಲೂ ಭಗವಂತನನ್ನು ನೋಡುತ್ತಿರುವುದರಿಂದ ಸ್ತಂಭೀಭೂತನಾಗಿ; ಕೆಲವು ವೇಳೆ ಬಾಲಕನ ಹಾಗೆ — ಯಾವ ಆಸಕ್ತಿಯೂ ಇಲ್ಲದೆ ಕಂಕುಳಲ್ಲಿ ಬಟ್ಟೆ ಇಟ್ಟುಕೊಂಡು ಸುತ್ತಾಡುವ ಮಕ್ಕಳ ಹಾಗೆ ಇರುತ್ತಾನೆ. ಈ ಅವಸ್ಥೆಯಲ್ಲಿ ಕೆಲವು ವೇಳೆ ಬಾಲಭಾವದಿಂದ — ಹುಡುಗಾಟವಾಡುತ್ತ; ಕೆಲವು ವೇಳೆ ಯುವಕಭಾವದಿಂದ — ಸಿಂಹ ಪರಾಕ್ರಮದಿಂದ ಕೆಲಸಮಾಡುತ್ತ, ಲೋಕಶಿಕ್ಷಣ ಮಾಡುತ್ತ ಇರುತ್ತಾನೆ.

❁ ಕಡ್ಡಿಗಳನ್ನು ಒಂದಕ್ಕೊಂದು ಉಜ್ಜಿದರೆ ಯಾವ ರೀತಿ ಬೆಂಕಿ ಉತ್ಪನ್ನವಾಗುತ್ತದೆಯೋ, ಅದೇ ರೀತಿ ತೀವ್ರ ಭಕ್ತಿಯೊಂದಿದ್ದರೆ ಮನುಷ್ಯರಲ್ಲಿಯೂ ಭಗವಂತನನ್ನು ದರ್ಶಿಸಬಹುದು.

❁ ಪ್ರೇಮೋನ್ಮಾದ ಉಂಟಾದರೆ ಸರ್ವಭೂತಗಳಲ್ಲಿಯೂ ಆತನನ್ನು ನೋಡಬಹುದು, ಗೋಪಿಯರು ಸರ್ವಭೂತಗಳಲ್ಲಿಯೂ ಶ್ರೀಕೃಷ್ಣ ಇರುವುದನ್ನು ಕಂಡಿದ್ದರು; ಎಲ್ಲವೂ ಅವರಿಗೆ ಕೃಷ್ಣಮಯವಾಗಿ ಕಂಡಿತು. ಅವರದು ಪ್ರೇಮೋನ್ಮಾದ.

ಶ್ರೀರಾಮಕೃಷ್ಣ ವಚನವೇದದಿಂದ